# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 10/2019**

**ದೋ.ಸಾ. : 28 ಪ್ರಾ.ಸಾ. : 11**

ಸಾಕ್ಷಿಯ ಹೆಸರು : ಆರ್ಫಾ ಯಾನೆ ರೇಷ್ಮಾ ಶಫಿ
ಗಂಡನ ಹೆಸರು : ಶಫಿ
ವಯಸ್ಸು : 26 ವರ್ಷ
ಕೆಲಸ : ಗೃಹಿಣಿ
ವಾಸ : ಗಾಂಧಿನಗರ, ದಾಂಡೇಲಿ

**ದಿನಾಂಕಃ 20-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಈಗ ನ್ಯಾಯಾಲಯದ ಮುಂದೆ ಇರುವ 3 ನೇ ಆರೋಪಿ ನನ್ನ ಗಂಡ. 2 ನೇ ಆರೋಪಿಯ ಪರಿಚಯ ನನಗೆ ಇರುವುದಿಲ್ಲ. ಚಾಸಾ-27 ಫರ್ಜಾನ ರವರು ನನಗೆ ಗೊತ್ತಿಲ್ಲ. ಪೊಲೀಸರು ಎಂದಿಗೂ ನಮ್ಮ ಮನೆಯ ಹತ್ತಿರ 2 ಮತ್ತು 3 ನೇ ಆರೋಪಿಗಳನ್ನು ಕರೆದುಕೊಂಡು ಬಂದಿಲ್ಲ. ಪೊಲೀಸರು ನಮ್ಮ ಮನೆಯಿಂದ 3 ನೇ ಆರೋಪಿಯ ಮೂಲಕ ಯಾವುದೇ ವಸ್ತುಗಳನ್ನು ಜಪ್ತುಪಡಿಸಿಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಗಂಡ 3 ನೇ ಆರೋಪಿಯ ಮೇಲೆ ಯಾವ ರೀತಿಯ ಪ್ರಕರಣ ದಾಖಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಿಪಿ-6 ಫೋಟೋವನ್ನು ಸಾಕ್ಷಿ ನೋಡಿದ್ದು, ಅದರಲ್ಲಿ ಕಾಣುತ್ತಿರುವ ಮನೆಯು ನಾವು 2018 ರಲ್ಲಿ ವಾಸವಾಗಿದ್ದ ಬಾಡಿಗೆ ಮನೆ ಎಂದು ನುಡಿಯುತ್ತಾರೆ. ನಿಪಿ-6 ಫೋಟೋದಲ್ಲಿ ಕಾಣುತ್ತಿರುವ 3 ನೇ ಆರೋಪಿ ನನ್ನ ಗಂಡ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ**

2. ದಿಃ 14–10–2018 ರಂದು ನನ್ನ ಗಂಡ ಶಫಿಯು ಚಾಸಾ–26 ರಮೇಶ ಲಮಾಣಿಗೆ ಸೇರಿದ ಬೈಕ್ ನ್ನು ತೆಗೆದುಕೊಂಡು ಸದರಿ ಬೈಕ್ ಮೇಲೆ ನನ್ನನ್ನು ಉಳವಿಗೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ಅದೇ ದಿನ 2 ನೇ ಆರೋಪಿಯ ಹೆಂಡತಿ, ಅಕ್ಕಳಾದ ಚಾಸಾ–27 ಹಾಗೂ ಅವರ ಕುಟುಂಬದವರೂ ಸಹ ದಾಂಡೇಲಿಯಿಂದ ಕಾರಿನಲ್ಲಿ ಉಳವಿಗೆ ಪಿಕ್‌ನಿಕ್ ಗೆ ಬಂದಿದ್ದರು ಎಂದರೆ ಸರಿಯಲ್ಲ. ಆ ದಿನ ನಾವೆಲ್ಲರೂ ಉಳವಿಯಲ್ಲಿರುವ ನನ್ನ ಗಂಡನ ಮನೆಯಲ್ಲಿಯೇ ಉಳಿದುಕೊಂಡೆವು ಎಂದರೆ ಸರಿಯಲ್ಲ. ದಿಃ 15–10–2018 ರಂದು 2 ನೇ ಆರೋಪಿ ಮುಸ್ತಾಕ್ ಗೆ ಬಹಳಷ್ಟು ಕರೆಗಳು ಬರುತ್ತಿದ್ದು, ಆತನ ಅಕ್ಕ ಚಾಸಾ–27 ರವರು 2 ನೇ ಆರೋಪಿ ಬಳಿ ವಿಚಾರಿಸಿದಾಗ, ಆತ ಚಾಸಾ–27 ರವರ ಬಳಿ ತನ್ನ ಗಾಡಿ ಗೋವಾಗೆ ಬಾಡಿಗೆಗೆ ಹೋಗಿದೆ, ಗಾಡಿಯ ಚಾಲಕ ನನಗೆ ಕರೆ ಮಾಡುತ್ತಿದ್ದಾನೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ.

3. ದಿಃ 16–10–2018 ರಂದು 2 ನೇ ಆರೋಪಿ ಮುಸ್ತಾಕ್ ನು ತನ್ನ ಹೆಂಡತಿಯ ಹತ್ತಿರ ತಾನು ಕಾರವಾರಕ್ಕೆ ಹೋಗಿ ಬರುತ್ತೇನೆ ಎಂದು ಹೇಳಿ, ತನ್ನ ಕಾರನ್ನು ತೆಗೆದುಕೊಂಡ ಹೋದ ಎಂದರೆ ಸರಿಯಲ್ಲ. ಹೋದ ನಂತರ ಆತ ನನ್ನ ಗಂಡನಿಗೆ ಕರೆ ಮಾಡಿದ ಮೇರೆಗೆ, ನನ್ನ ಗಂಡ 2 ನೇ ಆರೋಪಿಯಾಗಿ ಭೇಟಿಯಾಗಿ ಬರುತ್ತೇನೇ ಎಂದು ಹೇಳಿ ಮೋಟಾರ್ ಸೈಕಲ್ ಮೇಲೆ ಹೋಗಿದ್ದು, ರಾತ್ರಿ ವಾಪಸ್ ಬಂದಿರುತ್ತಾನೆ ಎಂದರೆ ಸರಿಯಲ್ಲ. ಆತ ವಾಪಸ್ ಬಂದ ನಂತರ ನಮ್ಮ ಬಳಿ 2 ನೇ ಆರೋಪಿ ಮುಸ್ತಾಕ್ ತನ್ನ ಕಾರ್ ನ್ನು ತೆಗೆದುಕೊಂಡು ದಾಂಡೇಲಿಗೆ ಹೋದ ಎಂದು ತಿಳಿಸಿರುತ್ತಾನೆ ಎಂದರೆ ಸರಿಯಲ್ಲ.

4. 2 ನೇ ಆರೋಪಿ ಮುಸ್ತಾಕ್ ನ ಹೆಂಡತಿ ಗರ್ಭಿಣಿಯಿದ್ದು, ಆಕೆಗೆ ಹೊಟ್ಟೆನೋವು ಬಂದ ಕಾರಣ, ದಿಃ17–10–2018 ರಂದು ನಾವು ಆಕೆಯನ್ನು ದಾಂಡೇಲಿಯ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು ಎಂದರೆ ಸರಿಯಲ್ಲ. ಆ ದಿನ 2 ನೇ ಆರೋಪಿ ಮುಸ್ತಾಕ್ ಮನೆಗೆ ಬರದೆ ಇದ್ದುದ್ದರಿಂದ ಹಾಗೂ ಆತನ ಹೆಂಡತಿಗೆ ಹೊಟ್ಟೆ ನೋವು ಕಾಣಿಸಿಕೊಂಡಿದ್ದರಿಂದ, ಆತನ ಅಕ್ಕ ಚಾಸಾ–27 ರವರು 2 ನೇ ಆರೋಪಿಗೆ ಕರೆ ಮಾಡಿದ್ದು, ಆತ ಕರೆಗಳನ್ನು ಸ್ವೀಕರಿಸಲಿಲ್ಲ ಹಾಗೂ ಆತನ ಮೊಬೈಲ್ ಮೊಬೈಲ್ ಸ್ವಿಚ್ ಆಫ್ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಿಃ 26–10–2018 ರಂದು ಸಂಜೆ ಪೊಲೀಸರು ತಮ್ಮ ವಾಹನದಲ್ಲಿ 2 ಮತ್ತು 3 ನೇ ಆರೋಪಿಗಳನ್ನು ನಾವು ವಾಸವಾಗಿದ್ದ ದಾಂಡೇಲಿಗೆ ಕರೆದುಕೊಂಡು ಬಂದಿದ್ದರು ಎಂದರೆ

ಸರಿಯಲ್ಲ. ಆ ಸಮಯದಲ್ಲಿ ನನ್ನ ಗಂಡ 3 ನೇ ಆರೋಪಿ ನನ್ನನ್ನು ಪೊಲೀಸರಿಗೆ ಪರಿಚಯಿಸಿದನು ಎಂದರೆ ಸರಿಯಲ್ಲ. ನಂತರ ನನ್ನ ಗಂಡ ಶಫಿಯು ಮನೆಯ ಒಳಗೆ ಹೋಗಿ, ಒಂದು ಮೊಬೈಲ್, ಕೃತ್ಯದ ಸಮಯದಲ್ಲಿ ತಾನು ಧರಿಸಿದ್ದ ಒಂದು ಶರ್ಟ್, ಒಂದು ಪ್ಯಾಂಟ್, ಒಂದು ಬಂಗಾರದ ಚೈನ್ ನ್ನು ತಂದು ಪೊಲೀಸರಿಗೆ ಕೊಟ್ಟರು ಎಂದರೆ ಸರಿಯಲ್ಲ. ಅದನ್ನು ನಿಪಿ–7 ರಂತೆ ಪಂಚನಾಮೆಯ ಮಾಡಿ ಪೊಲೀಸರು ಜಪ್ತುಪಡಿಸಿಕೊಂಡರು ಎಂದರೆ ಸರಿಯಲ್ಲ.

5. ಆ ನಂತರ "ಮೃತ ಪ್ರೇಮಕುಮಾರನು ಕಾರವಾರದ ಬೈತಕೋಲ ಬಂದರಿನ ಶಿಪ್ಪಿಂಗ್ ಏಜೇನ್ಸಿಯಲ್ಲಿ ಕೆಲಸ ಮಾಡುತ್ತಿದ್ದು, ಅದೇ ಬಂದರಿನಲ್ಲಿ 1 ನೇ ಆರೋಪಿಯು ಸಹ ಶಿಪ್ಪಿಂಗ್ ಕಂಪನಿಯನ್ನು ನಡೆಸುತ್ತಿದ್ದು, ಮೃತನು ನಡೆಸುತ್ತಿದ್ದ ಶಿಪ್ಪಿಂಗ್ ಕಂಪನಿಯ ವ್ಯವಹಾರ ಚೆನ್ನಾಗಿ ನಡೆಯುತ್ತಿದ್ದ ಕಾರಣ, 1 ನೇ ಆರೋಪಿಗೆ ಪ್ರೇಮಕುಮಾರನ ಮೇಲೆ ವೈ ಮನಸ್ಸು ಉಂಟಾಗಿ, ಪ್ರೇಮಕುಮಾರನನ್ನು ಕೊಲೆ ಮಾಡಿ, ಸಾಯಿಸುವ ಉದ್ದೇಶದಿಂದ 1 ನೇ ಆರೋಪಿಯು ತನ್ನ ಸಂಗಡ ಕೆಲಸ ಮಾಡುತ್ತಿದ್ದ 2 ನೇ ಆರೋಪಿಗೆ ಪ್ರೇಮಕುಮಾರನನ್ನು ಕೊಲೆ ಮಾಡುವಂತೆ ತಿಳಿಸಿದ್ದು, ಅದರಂತೆ 2 ನೇ ಆರೋಪಿಯು 3 ನೇ ಆರೋಪಿಯ ಸಹಾಯ ಪಡೆದು, ಪ್ರೇಮಕುಮಾರನನ್ನು ಆಕಳಗವಿ ಅರಣ್ಯ ಪ್ರದೇಶಕ್ಕೆ ಕರೆದುಕೊಂಡು ಹೋಗಿ, ಅಲ್ಲಿ 2 ಮತ್ತು 3 ನೇ ಆರೋಪಿಗಳು ಇಬ್ಬರು ಸೇರಿ ಕತ್ತಿಗಳಿಂದ ಪ್ರೇಮಕುಮಾರನ ಮೇಲೆ ಹಲ್ಲೆ ಮಾಡಿ, ಕಡಿದು, ಕೊಲೆ ಮಾಡಿರುತ್ತಾರೆ ಹಾಗೂ ಸಾಕ್ಷ್ಯ ನಾಶಪಡಿಸುವ ಸಲುವಾಗಿ ಕೊಲೆ ಮಾಡಲು ಉಪಯೋಗಿಸಿದ ವಸ್ತುಗಳನ್ನು ಹಾಗೂ ಮೃತನ ಮತ್ತು 2 ನೇ ಆರೋಪಿಯ ಬಟ್ಟೆಗಳನ್ನು ಕಾಳಿ ನದಿಯ ನೀರಿನಲ್ಲಿ ಬಿಸಾಡಿರುತ್ತಾರೆ" ಎಂದು ನನಗೆ ತಿಳಿದು ಬಂತು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೊಲೀಸರ ಮುಂದೆ ದಿಃ 26–10–2018 ರಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ–33 ಎಂದು ಗುರುತಿಸಲಾಯಿತು. ಘಟನೆಯ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ 3 ನೇ ಆರೋಪಿ ನನ್ನ ಗಂಡನಾದ ಕಾರಣ ಹಾಗೂ 2 ನೇ ಆರೋಪಿ ನಮ್ಮ ಸಂಬಂಧಿಕನಾದ ಕಾರಣ, ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದ**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದ**

6. 3 ನೇ ಆರೋಪಿಯಾದ ನನ್ನ ಗಂಡ ಶಫಿ ಟಾಟಾ ಏಸ್ ಗಾಡಿಯನ್ನು ಬಾಡಿಗೆಗೆ ಓಡಿಸುತ್ತಿದ್ದನು. ನಾನು ಹಾಗೂ ನನ್ನ ಗಂಡ ದಾಂಡೇಲಿಯಲ್ಲಿ ವಾಸವಾಗಿದ್ದೆವು. ಉಳವಿಯಲ್ಲಿ ನಮ್ಮ ಮನೆ ಇರುವುದಿಲ್ಲ ಹಾಗೂ ಅಲ್ಲಿ ಯಾರು ನಮ್ಮ ಸಂಬಂಧಿಕರು ಇರುವುದಿಲ್ಲ. ನಿಪಿ–27 ರಿಂದ 30 ಪೋಟೋಗಳಲ್ಲಿ ಕಾಣುತ್ತಿರುವ ಬೈಕ್ ನ್ನು ನನ್ನ ಗಂಡ ಎಂದಿಗೂ ತಂದಿರುವುದಿಲ್ಲ. ನಿಪಿ–6 ಪೋಟೋದಲ್ಲಿ ಕಾಣುತ್ತಿರುವ ಮನೆಗೆ ಪೊಲೀಸರು ಎಂದಿಗೂ ಬಂದಿರುವುದಿಲ್ಲ. ಸದರಿ ಪೋಟೋವನ್ನು ಯಾರು, ಯಾವಾಗ ತೆಗೆದರು ಎಂದು ನನಗೆ ಗೊತ್ತಿಲ್ಲ. ಪೊಲೀಸರು ಎಂದಿಗೂ ನನ್ನನ್ನು ವಿಚಾರಣೆಗೆ ಕರೆದಿಲ್ಲ ಹಾಗೂ ಯಾವುದೇ ವಿಚಾರಣೆ ಮಾಡಿರುವುದಿಲ್ಲ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ವಿ.ಎನ್.ಎನ್ ವಕೀಲರಿಂದ**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ ಹೆಚ್.ಎಸ್.ಎಸ್.ವಕೀಲರಿಂದ**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ